ದಿಃ14.01.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನಾನು ಘಟನಾ ಸಮಯದಲ್ಲಿ ಗ್ರಾಮ ಪಂಚಾಯ್ತಿ ಸದಸ್ಯನಿದ್ದು 1 ನೇ ಆರೋಪಿ ಸಹ ಸದಸ್ಯರಿದ್ದರು ಎಂದರೆ ಸರಿ. ಅಕ್ಕಪಕ್ಕ ಜಮೀನಿನವರು ಚಾಸಾ.1 ಚರ್ಚ್ ಕಟ್ಟಲು ಜಮೀನು ಖರೀದಿಸಿರುತ್ತಾರೆಂದು ನನಗೆ ಹೇಳಿದರು. ಸದರಿ ಜಮೀನು ಕೂಡ್ಲೂರು ಪಂಚಾಯ್ತಿಗೆ ಬರುತ್ತದೆ. ಚಾಸಾ.1 ರವರು ಚರ್ಚ್ ಕಟ್ಟಲು ಯಾವುದೇ ಪರವಾನಗಿ ಅರ್ಜಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ.

2. ಚಾಸಾ.1 ಮತ್ತು ಇತರರು ಅವರ ಜಮೀನಿನಲ್ಲಿ ಕುಡಿಯುವುದು, ಗಲಾಟೆ ಮಾಡುತ್ತಿದ್ದುದನ್ನು ನಾನು ನೋಡಿಲ್ಲ. ನಾನು ಯಾವುದೇ ಸಾರ್ವಜನಿಕರ ಬಳಿ ಲಿಖಿತವಾಗಿ ಚಾಸಾ.1 ರವರ ಮೇಲೆ ಹೇಳಿಕೆ ಕೊಡುವಂತೆ ಕೇಳಿ ಪಡೆದಿಲ್ಲ. ನನಗೆ ಚಾಸಾ.1 ಮತ್ತು ಇತರರು ಯಾವುದೇ ಮತಾಂತರ ಮಾಡಿದುದನ್ನು ನಾನು ನೋಡಿಲ್ಲ ಮತ್ತು ಭಾವಚಿತ್ರಗಳನ್ನು ಗಮನಿಸಿಲ್ಲ.

3. ನಮ್ಮ ಊರಿನಲ್ಲಿ ಧಾರ್ಮಿಕ ಕಲಹಗಳು ಸುಮಾರು 2-3 ಬಾರಿ ನಡೆದಿವೆ. ಆ ವಿಷಯವಾಗಿ ಯಾವುದೇ ದೂರುಗಳು ದಾಖಲಾಗಿಲ್ಲ. ಧಾರ್ಮಿಕ ಕಲಹದಿಂದ ಯಾರಿಗೂ ಪೆಟ್ಟು ಅಥವಾ ನಷ್ಟ ಉಂಟಾಗಿಲ್ಲ. ಬಾಯಿ ಮಾತಿನಲ್ಲಿ ಮಾತ್ರ ಕಲಹಗಳು ನಡೆದಿರುತ್ತವೆ.

4. ನಮ್ಮ ಗ್ರಾಮಸ್ಥರು ಚಾಸಾ.1 ಮತ್ತು ಇತರರು ಮತಾಂತರವಾಗಲು ಆಸೆ ಆಮಿಷ ಒಡ್ಡುತ್ತಿದ್ದಾರೆಂದು ಹೇಳುತ್ತಿದ್ದರು. ನಾನು ನಮ್ಮ ಗ್ರಾಮಸ್ಥರಿಂದ ಚಾಸಾ.1ರವರ ಮೇಲೆ ದೂರು ನೀಡಲು ಯತ್ನಿಸಿಲ್ಲ. ಚಾಸಾ.1ರವರ ಯಾರನ್ನಾರದರೂ ಮತಾಂತರ ಮಾಡಿದ ಬಗ್ಗೆ ನನ್ನ ಬಳಿ ದಾಖಲೆಗಳು ಇಲ್ಲ.

5. ನಾವು ಕೇಳಲು ಹೋದಾಗ ಚಾಸಾ.1 ಮತ್ತು ಇತರರು ಅವರ ಜಮೀನಲ್ಲಿ ಕುಣಿಯುತ್ತಿದ್ದರು. ಅವರು ಏನು ಕುಡಿಯುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಆ ಸಮಯದಲ್ಲಿ ಫೋಟೋ ವಿಡಿಯೋ ತೆಗೆಯುವುದನ್ನು ಮಾಡಲಿಲ್ಲ. ಚಾಸಾ.1ರವರು ಘಟನಾ ಸಮಯದಲ್ಲಿ ಅವರ ಜಮೀನಿಗೆ ಶಾಂತಿಯುತವಾಗಿ ಕಲ್ಲು ಹಾಕಿಕೊಳ್ಳುತ್ತಿದ್ದು ನಾನು ಹೇಳಿದ ರೀತಿಯಲ್ಲಿ ಯಾವುದೇ ಗಲಾಟೆ ಮಾಡಲಿಲ್ಲ ಎನ್ನುವುದು ಸರಿಯಲ್ಲ. ಅ ಕಾರಣಕ್ಕೆ ನಾವು ಫೋಟೋ ವಿಡಿಯೋ ತೆಗೆಯಲಿಲ್ಲ ಎನ್ನುವುದು ಸರಿಯಲ್ಲ. ಶಾಲೆಯವರಾಗಲೀ, ಸಾರ್ವಜನಿಕರಾಗಲೀ ನಮ್ಮ ಗ್ರಾಮ ಪರಾಯ್ತಿಗೆ ದೂರು ನೀಡಲಿಲ್ಲ ಎಂದರೆ ಸರಿ. ಚಾಸಾ.1ರವರು ಚನ್ನಪಟ್ಟಣದಲ್ಲಿ ವಾಸಿಸುತ್ತಾರೆ ಎಂದರೆ ಸರಿ. ಅವರು ಕ್ರಿಶ್ಚಿಯನ್ ಸಮುದಾಯದವರು ಎಂದರೆ ಸರಿ. ಚಾಸಾ.1ರವರ ಜಮೀನಿಗೆ ಬಂದಿದ್ದವರು ಇತರೆ ಕ್ರಿಶ್ಚಿಯನ್ ಮತ್ತು ಎಸ್ ಸಿ ಜನಾಂಗದವರು ಎಂದರೆ ಸರಿ.

6. ನಾವು ಘಟನೆಯ ಸಮಯದಲ್ಲಿ ಮಾತನಾಡದೇ ಅವರಿಗೆ ಹೊಡೆದು ಹೆಣ್ಣು ಮಕ್ಕಳನ್ನು ಎಳೆದಾಡಿರುತ್ತೇವೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ನಾವು ಚಾಸಾ.1ರವರ ಮೇಲೆ ದೂರು ನೀಡಲಿಲ್ಲ ಎಂದರೆ ಸರಿಯಲ್ಲ. ಚಾಸಾ.1 ಮತ್ತು ಇತರರನ್ನು ಸ್ಥಳದಿಂದ ಹೆದರಿಸಿ ಕಳುಹಿಸಿದ ಮೇಲೆ ನಾನು ಆರೋಪಿಗಳನ್ನು ಪ್ರಚೋದಿಸಿ ಚಾಸಾ.1ರವರು ತಮ್ಮ ಜಮೀನಿಗೆ ಹಾಕಿದ್ದ ಕಲ್ಲುಗಳನ್ನು ಕಿತ್ತು ಹಾಕಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ.1 ಮತ್ತು ಇತರರು ಜಮೀನಲ್ಲಿ ಇರಬಾರದು, ಬೇರೆ ಜಾತಿಯವರು ಎಂಬ ಕಾರಣಕ್ಕೆ ನಾನು ಮತ್ತು ಆರೋಪಿಗಳು ಅವರಿಗೆ ತೊಂದರೆ ನೀಡಿರುತ್ತೇವೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.